ಬಾಲಕೃಷ್ಣನಿಗೆ ಇದ್ದಕ್ಕಿದ್ದಂತೆ ಕಳೆದ ವರ್ಷದ ಕ್ರಿಸ್‌ಮಸ್ ಹಬ್ಬ ನೆನಪಿಗೆ ಬಂತು. ಸಿಸ್ಟರ್ ರೋಸಿ ಒಂದು ವಾರ ಮುಂಚೆಯೇ ದೇವನಹಳ್ಳಿಗೆ ಹೋಗಿ ಅಲ್ಲಿ ಲತೀಫ್ ಸಾಹೇಬರ ಅಂಗಡಿಯಿಂದ ಡ್ರೆಸ್ಸು ಕಿರೀಟ ಕಠಾರಿ ನಕಲಿ ಆಭರಣ ಟೋಫನ್ನು ನವಿಲುಗರಿ ಮುಖಕ್ಕೆ ಬಳಿಯುವ ರಂಗು ಎಲ್ಲ ತಂದಿದ್ದರು. ಮಕ್ಕಳಿಗೆ ಬಣ್ಣ ಬಣ್ಣದ ಫ್ಯಾನ್ಸಿ ಡ್ರೆಸ್ ತೊಡಿಸಿ ಹಾಡಿಸಿದ್ದರು, ಕುಣಿಸಿದ್ದರು. ಬಾಲಕೃಷ್ಣನಿಗೆ ಅವರೇ ಕೃಷ್ಣನ ಪೋಷಾಕು ಹಾಕಿ ಅಲಂಕಾರ ಮಾಡಿ, ಇದೀಗ ನಿಜವಾದ ಕೃಷ್ಣ ನೀನು ಎಂದು ಅವನ ಕೆನ್ನೆ ಹಿಂಡಿ ವೇದಿಕೆಗೆ ಕರೆತಂದಿದ್ದರು. ಅವತ್ತು ರಾತ್ರಿ ಅವನ ಅಮ್ಮ ಮಗನಿಗೆ ದೃಷ್ಟಿಯಾಗಿರಬಹುದೆಂದು ಉಪ್ಪು ಮೆಣಸು ನಿವಾಳಿಸಿ ಬೆಂಕಿಗೆ ಹಾಕಿದ್ದರು.



ಬಸ್ಸಿನ ಕಿಟಕಿಗಳನ್ನೆಲ್ಲ ಮುಚ್ಚಲಾಗಿತ್ತು. ಆದರೆ ಡ್ರೈವರ್ ಬದಿಯ ಕಿಟಕಿಯಿಂದ ಒಳಕ್ಕೆ ನುಗ್ಗಿದ ಮಂಜು ಅವನ ಪಕ್ಕದ ಸೀಟಿನಲ್ಲಿ ಕೂತಿದ್ದ ಗೇಬ್ರಿಯಲ್ ಚಿನ್ನಪ್ಪನವರನ್ನು ಮುತ್ತಿಕೊಂಡದ್ದೇ ಅವರ ಮುಖ ತಣ್ಣಗಾಯಿತು. ಬೆಳಿಗ್ಗೇನೇ ಹೇಗೆ ಬೀಳ್ತಾ ಇತ್ತು ಮಂಜು. ಆಗಲೇ ಈ ಟ್ರಿಪ್ಪನ್ನ ಕ್ಯಾನ್ಸಲ್ ಮಾಡಿಬಿಡಬೇಕಾಗಿತ್ತು ಎಂದರವರು ಡ್ರೈವರನ್ನು ನೋಡುತ್ತ. ಅವನ ಹಿಂಬದಿಯ ಸೀಟಿನಲ್ಲಿದ್ದ ಸುಭದ್ರ ಟೀಚರ್, ನಮಗೂ ಹಾಗೇನೇ ಅನ್ನಿಸಿತ್ತು ಸರ್. ಆದರೆ ಮಕ್ಕಳಿಗೆ ನಿರಾಶೆಯಾಗುತ್ತಲ್ಲಾ ಅಂತ ನಿಮಗೆ ಹೇಳಲಿಲ್ಲ ಎಂದರು. ಹೊರಗೆ ಎಷ್ಟೆಲ್ಲ ಮಂಜು ಬೀಳುತ್ತಿತ್ತೆಂದರೆ ಮರವೋ ಮನೆಯೋ ದನವೋ ಲೈಟುಕಂಬವೋ ತೀರ ಹತ್ತಿರಕ್ಕೆ ಬಂದಾಗಲಷ್ಟೇ ಅದು ಮಸುಕುಮಸುಕಾಗಿ ಕಾಣಿಸುತ್ತಿದ್ದದ್ದು. ಆಶ್ಚರ್ಯವೆಂದರೆ ತೆಂಗಿನಮರಕ್ಕಿಂತ ಎತ್ತರವಾಗಿದ್ದ ಟಿಪ್ಪೂವಿನ ಕೋಟೆ ಕೂಡ, ಬಸ್ಸು ಅದಕ್ಕೆ ತಾಗಿಕೊಂಡು ನಿಲ್ಲುವವರೆಗೂ, ಸರಿಯಾಗಿ ಕಾಣಿಸಿರಲಿಲ್ಲ.

ದೇವನಹಳ್ಳಿಯಲ್ಲಿ ಬಾಲಕೃಷ್ಣನನ್ನು ಕೋಟೆಗಿಂತ ಹೆಚ್ಚು ಸೆಳೆದದ್ದು ಹಕ್ಕಿಗಳು. ಕೋಟೆಯ ಮೇಲಿಂದ ನೋಡುತ್ತಿರುವಾಗ ಕೆಳಗೆ ಕೆಲವು ಮನೆಗಳ ಅಂಗಳದಲ್ಲಿ ಬಗೆಬಗೆಯ ಹೂಹಣ್ಣುಗಳ ಮರಗಿಡಗಳು ಕಾಣಿಸಿದ್ದವು. ಅದಾಗ ತುಸುತುಸುವೇ ಕರಗುತ್ತಿದ್ದ ಮಂಜಿನಲ್ಲಿ ಎಲ್ಲೆಲ್ಲಿಂದಲೋ ಹಾರಿಬಂದು ಹೂವುಗಳಿಗೆ ಮುತ್ತಿಡುತ್ತಿದ್ದ ಹತ್ತಾರು ಹಕ್ಕಿಗಳು. ಬಾಲಕೃಷ್ಣನಿಗೆ ಆ ಹಕ್ಕಿಗಳನ್ನು ಎಷ್ಟು ನೋಡಿದರೂ ಸಾಕೆನಿಸಲಿಲ್ಲ. ಅವುಗಳ ಬಣ್ಣಗಳೋ! ಕೆಲವದರ ತಲೆಯ ಮೇಲೆ ಬಿಳಿ ನಾಮಗಳು; ಕಣ್ಣಿನ ಸುತ್ತ ಕೆಂಪು ವೃತ್ತ; ಕಪ್ಪು, ಪಿಂಕು ಬಣ್ಣಗಳ ಮೈಯಿ; ಗಿಡದಿಂದ ಗಿಡಕ್ಕೆ ಹಾರಿಸುವ ಬಣ್ಣಬಣ್ಣದ ರೆಕ್ಕೆಗಳು; ಉದ್ದನೆಯ ತೋಕೆಗಳು. ಇದ್ದಕ್ಕಿದ್ದಂತೆ ಯಾರದೋ ಮನೆಯ ಹಿತ್ತಿಲಬಾಗಿಲು ತೆರೆದುಕೊಂಡದ್ದೇ ಆ ಹಕ್ಕಿಗಳೆಲ್ಲ ಒಂದೇ ಕ್ಷಣದಲ್ಲಿ ಪುರ್ರೆಂದು ಹಾರಿಹೋಗಿದ್ದವು.

ಕೋಟೆಯ ಮೇಲೆ ಅಲ್ಲಲ್ಲಿ ಬೆಳೆದುಕೊಂಡಿದ್ದ ಹುಲ್ಲು ಇಬ್ಬನಿಯಿಂದ ತೊಯ್ದಿತ್ತು. ಒಂದು ಕಡೆ ಬೆಳೆದಿದ್ದ ಕುರುಚಲು ಗಿಡದಲ್ಲಿ ರೆಂಬೆಯಿಂದ ರೆಂಬೆಗೆ ಕಟ್ಟಿದ್ದ ಜೇಡನ ಬಲೆಯಲ್ಲಿ ಸಣ್ಣ ಸಣ್ಣ ಮಣಿಗಳಂತೆ ಹೊಳೆಯುತ್ತಿದ್ದವು ಇಬ್ಬನಿಯ ಹನಿಗಳು. ಇದ್ದಕ್ಕಿದ್ದಂತೆ ರೊಯ್ಯನೆ ಬೀಸಿಬಂದ ಜೋರುಗಾಳಿ ಮಕ್ಕಳ ಮುಖಗಳಿಗೆ ರಪ್ಪೆಂದು ಅಪ್ಪಳಿಸಿ ಅವರ ಯೂನಿಫಾರ್ಮುಗಳನ್ನು ಜಗ್ಗಿದವು. ಸ್ವಲ್ಪ ದೂರದಲ್ಲಿ ಗೇಬ್ರಿಯಲ್ ಚಿನ್ನಪ್ಪ ತಮ್ಮನ್ನು ನೆಲಕ್ಕೆ ಬೀಳಿಸುವಂತೆ ಅಲ್ಲಾಡಿಸುತ್ತಿದ್ದ ಆ ಗಾಳಿಯಲ್ಲೂ ಕೋಟಿನ ಒಳಜೇಬಿನಿಂದ ಬಾಚಣಿಗೆಯನ್ನು ತೆಗೆದು ತಮ್ಮ ಕೂದಲನ್ನು ಬಾಚಿಕೊಂಡಷ್ಟೂ ಅದು ಕೆದರಿಕೊಳ್ಳುತ್ತಿತ್ತು. ಸಿಸ್ಟರ್ ರೋಸಿಯವರು ಗಾಳಿ ಹಾರಿಸಿಬಿಟ್ಟ ತಮ್ಮ ವಸ್ತ್ರವನ್ನು ಸರಿಪಡಿಸಿಕೊಳ್ಳುತ್ತಿರುವಾಗ ಬಾಲಕೃಷ್ಣನಿಗೆ ಮೊಟ್ಟಮೊದಲು ಅವರ ರೇಶಿಮೆಯಂಥ ಕೂದಲು ಕಾಣಿಸಿ ಅವನು, ಎಂಥ ಚಂದದ ಕೂದಲು, ಇವತ್ತು ಅಮ್ಮನಿಗೆ ಹೇಳಬೇಕು, ಅಂತ ಅಂದುಕೊಂಡ. ನಾಲ್ಕೈದು ನಿಮಿಷ ಸರಿದಿತ್ತೋ ಇಲ್ಲವೊ, ಎದುರಿಗಿದ್ದ